**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕೋಡಿ.**

**ಎಸ್ ಸಿ ನಂ. 107/2016**

ಸಿಡಬ್ಲ್ಯು 8 ಪಿಡಬ್ಲ್ಯು 5

ದಿನಾಂಕಃ 03.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪೂರ್ಣ ಹೆಸರು : ಶ್ರೀಮತಿ ವಿಮಲಾ ಬಾಳಕೃಷ್ಣ ಕೋಷ್ಟಿ

ವಯಸ್ಸು : 60 ವರ್ಷ

ಉದ್ಯೋಗ : ಮನೆಗೆಲಸ

ವಾಸ ಸ್ಥಳ : ಕಮತೇನಟ್ಟಿ

**<u>ಮುಖ್ಯ ವಿಚಾರಣೆಃ-</u>** ಮಾನ್ಯ ಸರಕಾರಿ ಅಭಿಯೋಜಕರವರಿಂದಃ-

ಚಾಸಾ 1 ನನ್ನ ಮೊಮ್ಮಗ. ಚಾಸಾ 7 ನನ್ನ ಮಗಳು, ಚಾಸಾ 10 ರಿಂದ 12 ನನ್ನ ಮಕ್ಕಳು. ಚಾಸಾ 9 ಮತ್ತು 13 ನನ್ನ ಸಂಬಂಧಿಕರು. ಮೃತ ಬಾಲಕೃಷ್ಣ ನನ್ನ ಗಂಡ. ಆರೋಪಿತರು ಗೊತ್ತು. 10 ವರ್ಷದ ಹಿಂದೆ ಒಂದು ದಿನ ಚಾಸಾ 1 ಮನೆ ಹಿಂದೆ ಜೇನುಬಿಡಿಸಲು ಹೋದಾಗ ಚಾಸಾ 2 ಮೂತ್ರವಿಸರ್ಜನೆ ಮಾಡುತ್ತಿದ್ದಾಗ ಆತನು ನೋಡಿದ್ದಾನೆಂದು ಆತನಿಗೆ 1 ಮತ್ತು 5 ನೇ ಆರೋಪಿತರು ಹೊಡೆದಿದ್ದರು. ಮರುದಿನ 2 ಮತ್ತು 5 ನೇ ಆರೋಪಿತರು ನಮ್ಮ ಮನೆ ಹಿಂದೆ ಹಾಯ್ದು ಬೆಳಗ್ಗೆ 10.30 ಗಂಟೆಗೆ ಹೋಗುತ್ತಿದ್ದರು. ಆಗ ನಾನು ನನ್ನ ಮೊಮ್ಮಗನಿಗೆ ಯಾಕೆ ಹೊಡೆದಿರಿ ಎಂದು ಕೇಳಿದಾಗ ನೀವು ಉಳಕೊಂಡಿರಿ ಈಗ ಐತಿ ಬರ್ರಿ ಎಂದು ಹೇಳಿ ನಮ್ಮ ಮನೆಗೆ ಬಂದು ಬಡಿಗೆ , ಕಲ್ಲು ತಗೊಂಡು ಬಂದು ಕಲ್ಲಿನಿಂದ

ಹೊಡೆಯಲು ಶುರು ಮಾಡಿದರು. ನನ್ನ ಗಂಡನಿಗೆ 3 ಮತ್ತು 6 ನೇ ಆರೋಪಿತರು ಬಡಿಗೆಯಿಂದ ತಲೆಗೆ, ಬುಜಕ್ಕೆ ಹೊಡೆದರು. ಆಗ ಅವರು ಕುಸಿದು ಕೆಳಗೆ ಬಿದ್ದರು ಆಗ ಎಲ್ಲರೂ ಆತನಿಗೆ ಹೊಡೆಯುತ್ತಿದ್ದರು. ಆಗ ನಾನು ಕುಡಿಸಲು ನೀರು ತರಲು ಹೋದಾಗ ನನಗೂ ಸಹ 8 ನೇ ಆರೋಪಿ ಬಡಿಗೆಯಿಂದ ಕೈ ಮೇಲೆ ಹೊಡೆದಿದ್ದರಿಂದ ನೀರಿನ ತಂಬಿಗೆ ಕೆಳಗೆ ಬಿತ್ತು. ನಂತರ ಚಾಸಾ 10 ರಿಗೆ 1 ನೇ ಆರೋಪಿ ಬಡಿಗೆಯಿಂದ ತಲೆಗೆ ಹೊಡೆದು ರಕ್ತಗಾಯ ಪಡಿಸಿದ. ಚಾಸಾ 10 ರಿಂದ 12 ರಿಗೂ ಬಡಿಗೆಯಿಂದ ಹೊಡೆದರು. ಚಾಸಾ 11 ರಿಗೆ ಬಡಿಗೆಯಿಂದ 6 ಮತ್ತು 9 ನೇ ಆರೋಪಿತರು ಕೈಗೆ ಹೊಡೆದು ರಕ್ತಗಾಯ ಪಡಿಸಿದರು. ಚಾಸಾ 12 ರಿಗೆ 6 ನೇ ಆರೋಪಿ ಕಟ್ಟಿಗೆಯಿಂದ ತಲೆಗೆ ಮತ್ತು ಭುಜಕ್ಕೆ ಹೊಡೆದ. 6 ನೇ ಆರೋಪಿ ಚಾಸಾ 13 ರಿಗೆ ಭುಜದ ಮೇಲೆ ಹೊಡೆದ. ಆರೋಪಿತರು ನಮಗೆ ಹಡಸುಗಳಿರಾ ಎಂದು ಬೈದರು.

2) ನಂತರ ನನ್ನ ಗಂಡನಿಗೆ ನನ್ನ ಮಕ್ಕಳು ದವಾಖಾನೆಗೆ ತಗೊಂಡು ಹೋದರು. ಆಗ ಆರೋಪಿತರು ತಮ್ಮ ಮನೆಗೆ ಹೋದರು. ನಂತರ ನಾವು ಅಪ್ಪಣ್ಣಾ ಕೋಷ್ಟಿ ಎಂಬುವವರ ಮನೆಗೆ ಹೋದೆವು. ನಂತರ ಆರೋಪಿತರು ನಮ್ಮ ಮನೆ ಬಾಗಿಲು ಮುರಿಯಲು ಪ್ರಯತ್ನ ಮಾಡಿದರು. 1 ನೇ ಆರೋಪಿ ನಮ್ಮ ಮನೆಯ ಮುಂದಿನ ಬಾಗಿಲನ್ನು ಮುರಿದರು. ನಂತರ ನನ್ನ ಗಂಡನಿಗೆ ಲೆಕ ವಿವ್

ಆಸ್ಪತ್ರೆ ಬೆಳಗಾವಿಗೆ ದಾಖಲು ಮಾಡಿದರು. ಅಲ್ಲಿ ಅವರು 10-12 ದಿನ ಇದ್ದು ತಲೆಗೆ ಗಾಯವಾಗಿದ್ದರಿಂದ ತೀರಿಕೊಂಡರು. ಸಾಕ್ಷಿ ನ್ಯಾಯಾಲಯದ ಮುಂದಿರುವ ಮು.ಮಾ.17 ಮತ್ತು 18 ನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಮು.ಮಾ.1 ರಿಂದ 14 ನ್ನು ಕೂಡ ನೋಡಿ ಗುರುತಿಸುತ್ತಾರೆ. ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೇನೆ. ಈಗ ನ್ಯಾಯಾಲಯದ ಮುಂದಿರುವ ಆರೋಪಿತರ ನಮಗೆ ಹೊಡೆಬಡೆ ಮಾಡಿದರು ಇರುತ್ತಾರೆ.

**<u>ಪಾಟೀ ಸವಾಲುಃ</u>-** ಆರೋಪಿ ಪರ ಶ್ರೀ ಎಲ್ ಬಿ ಪಿ ವಕೀಲರು ಶ್ರೀ ಎಸ ಎನ ಪಿ ವಕೀಲರು ಪಾಟೀ ಸವಾಲುಮಾಡುವವರಿದ್ದು ಅವರಿಗೆ ಅನಾರೋಗ್ಯ ಇದೆ ಎಂದು ಸಮಯ ಕೇಳಿದ್ದು ಈ ಪ್ರಕರಣದಲ್ಲಿ ಶ್ರೀ ಎಲ್ ಬಿ ಪಿ ವಕೀಲರು ಕೂಡ ಆರೋಪಿ ಪರ ಹಾಜರಾಗಿದ್ದು ಇವರು ಪಾಟೀ ಸವಾಲು ಮಾಡಲು ಮುಂದೆ ಬಾರದ್ದರಿಂದ ಕೋರಿಕೆಯನ್ನು ತಿರಸ್ಕರಿಸಿ ಪಾಟಿ ಸವಾಲು ಇಲ್ಲಾ ಎಂದು ಪರಿಗಣಿಸಲಾಯಿತು.

**<u>ಮರು ಮುಖ್ಯ ವಿಚಾರಣೆ</u>** : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೆ ಕೆ ಸರಿ ಅದೆ ಅಂತಾ ಹೇಳುತ್ತಾರೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕೋಡಿ.